
# ಟೆಂಟ್ ಡ್ರೆಸ್

*ಈ ವೀಡಿಯೋದಲ್ಲಿ ನಾವು ಟೆಂಟ್ ಡ್ರೆಸ್ಸನ್ನು ಹೊಲೆಯುತ್ತಿದ್ದೇವೆ ನೀವು ಇದನ್ನು ಅಂಗಡಿಗೆ ಹೋಗುವಾಗ ಅಥವಾ ಸ್ನೇಹಿತರೊಂದಿಗೆ ಬ್ರಂಚ್ ಗೆ ಹೋಗುವಾಗಲೂ ಹಾಕಿಕೊಳ್ಳಬಹುದು.*
















**ವಸ್ತುಗಳ ವಿವರ**

60" ಅಗಲದ 3 ಮೀಟರ್ ಬಟ್ಟೆ
ನಾವು ಮೃದುವಾದ ಡೆನಿಮ್ ಬಟ್ಟೆಯನ್ನು ತೆಗೆದುಕೊಂಡಿದ್ದೇವೆ.
www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ ಟೆಂಟ್ ಡ್ರೆಸ್ಸಿನ ಟೆಂಪ್ಲೇಟ್
ಚಾಲ್ಕ್
ಕತ್ತರಿ
ರೂಲರ್
ಮೆಷರಿಂಗ್ ಟೇಪ್
ಬೀಡೆಡ್ ಪಿನ್ಸ್
ಮತ್ತು ಬಟ್ಟೆಗೆ ಹೋಲುವಂತ ದಾರ

ನಾವು ಹೇಗೆ ಮಾರ್ಕ್ ಮಾಡುವುದು ಮತ್ತು ಟೆಂಪ್ಲೇಟ್ ಸಹಾಯದಿಂದ ಬಟ್ಟೆಯನ್ನು ಕತ್ತರಿಸುವುದು, ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಸೇರಿಸುವುದು, ನೆಕ್ ಲೈನನ್ನು ಮುಗಿಸುವುದು, ಸೈಡ್ ಸೀಮನ್ನು ಮುಗಿಸಿ, ತೋಳುಗಳನ್ನು ಹೆಮ್ ಮಾಡಿ ಬಾಟಮನ್ನು ಹೆಮ್ ಮಾಡುವುದನ್ನು ತೋರಿಸುತ್ತೇವೆ.

**ಹಂತ 1 – ಟೆಂಪ್ಲೇಟನ್ನು ಮಾರ್ಕ್ ಮಾಡುವುದು ಮತ್ತು ಬಟ್ಟೆಯನ್ನು ಕತ್ತರಿಸುವುದು**

ಮೃದುವಾದ ಡೆನಿಮ್ ಬಟ್ಟೆಯನ್ನು ತೆರೆದು ಅದನ್ನು ಬಲಭಾಗ ಬಲಭಾಗವನ್ನು ಕಾಣುವಂತೆ ಮಡಚಬೇಕು. ಬಟ್ಟೆಯ ಹಿಂಭಾಗ ನಿಮನ್ನು ಕಾಣುವಂತೆ ಇರಬೇಕು.

ಟೆಂಪ್ಲೇಟನ್ನು ಬಟ್ಟೆಯ ಮಾರ್ಕಿಂಗ್ ಇರುವ ಮುಂಭಾಗದ ಮೇಲೆ ಇಡಬೇಕು. ಅದರ ಮೇಲೆ ಫೋಲ್ಡ್ ಎಂದು ಬರೆದಿರುವ ಭಾಗವನ್ನು ಬಟ್ಟೆಯ ಮಡಚಿರುವ ಭಾಗದ ಮೇಲೆ ಇಡಬೇಕು. ಬೀಡೆಡ್ ಪಿನ್ ಬಳಸಿ ಟೆಂಪ್ಲೇಟನ್ನು ಸರಿಯಾಗಿ ಪಿನ್ ಮಾಡಬೇಕು. ಚಾಲ್ಕನ್ನು ಬಳಸಿ ಟೆಂಪ್ಲೇಟಿನ ತುದಿಗಳನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಇದಾದ ಮೇಲೆ ಪಿನ್ ಹಳನ್ನು ತೆಗೆದು ಪಕ್ಕಕಿಡಿ. ಕತ್ತರಿಯನ್ನು ತೆಗೆದುಕೊಂಡು ಕತ್ತರಿಸಿ. ಮಾರ್ಕ್ ಮಾಡಿರುವ ಗೆರೆಗಳ ಮೇಲೆ ಕತ್ತರಿಸಿ. ನಿಮ್ಮ ಮುಂಭಾಗದ ಪೀಸ್ ಈಗ ತಯಾರಾಗಿದೆ.

ಇದೇ ವಿಧಾನದಲ್ಲಿ ಹಿಂಭಾಗಾದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡಬೇಕು. ಟೆಂಪ್ಲೇಟಿನ ಮೇಲೆ ಫೋಲ್ಡ್ ಎಂದು ಬರೆದಿರುವ ಭಾಗ ಬಟ್ಟೆಯ ಮಡಚಿರುವ ಭಾಗದ ಮೇಲೆ ಇಡಬೇಕು. ಟೆಂಪ್ಲೇಟನ್ನು ಬಟ್ಟೆಗೆ ಪಿನ್ ಮಾಡಿ ಟೆಂಪ್ಲೇಟಿನ ಔಟ್ ಲೈನನ್ನು ಚಾಲ್ಕನ್ನು ತೆಗೆದುಕೊಂಡು ಹಾಕಿ. ಟೆಂಪ್ಲೇಟಿನಿಂದ ಪಿನ್ನಗಳನ್ನು ತೆಗೆಯಿರಿ ಮತ್ತು ಡ್ರೆಸ್ಸಿನ ಹಿಂಭಾಗದ ಪೀಸನ್ನು ಕಟ್ ಮಾಡಿ.




















**ಹಂತ 2 - ಮುಂಭಾಗದ ಮತ್ತು ಹಿಂಭಾಗದ ಪೀಸನು ಸೇರಿಸಿ ಭುಜದ ಭಾಗವನ್ನು ತೋಳಿಗೆ ಸೇರಿಸುವುದು**

ಈಗ ತಾನೆ ಕಟ್ ಮಾಡಿರುವ ಬಟ್ಟೆಯ ಹಿಂಭಾಗವನ್ನು ತೆಗೆದುಕೊಂಡು ಅದನ್ನು ಮೇಜಿನ ಮೇಲೆ ಹರಡಿ. ಬಟ್ಟೆಯ ಹಿಂಭಾಗ ಕೆಳಗಡೆ ಬರುವಂತೆ ಇರಬೇಕು. ಇದು ಬಟ್ಟೆಯ ಹಿಂಭಾಗ ಮತ್ತು ಇದು ಬಟ್ಟೆಯ ಮುಂಭಾಗವಗಿರುತ್ತದೆ. ಬಟ್ಟೆಯ ಮುಂಭಾಗವನ್ನು ಹಿಂಭಾಗದ ಮೇಲೆ ಇಡಬೇಕು. ನಾವು ಇದನ್ನು ಒಟ್ಟಿಗೆ ಹೊಲೆಯುತ್ತೇವೆ. ಬಲಭಾಗ ಬಲಭಾಗವನ್ನು ಕಾಣುವಂತೆ ಇರಬೇಕು.

ನಾವು ಭುಜದ ಭಾಗದಿಂದ ತೋಳಿನ ಭಾಗವನ್ನು ಹೊಲೆಯುತ್ತೇವೆ. ಎರಡೂ ಪಿಸ್ ಗಾಳನ್ನು ಬೇಡೆಡ್ ಪಿನ್ನಿಂದ ಪಿನ್ ಮಾಡಿ. ಪಿನ್ ಮಾಡಿರುವ ಬಟ್ಟೆಯನ್ನು ಊಷಾ ಜನೋಮ್ ವಂಡರ್ ಸ್ಟಿಚ್ ಪ್ಲಸ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ.ಒಂದು ತೋಳಿನ ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗಡೆ ಇಡಬೇಕು.ಸ್ಟಿಚ್ ಸೆಲೆಕ್ಟರ್ ಡಯಲನ್ನು A ಮತ್ತು ಹೊಲಿಗೆಯ ಉದ್ದ2.5 ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಹೊಲಿಗೆಯನ್ನು ಭದ್ರಗೊಳಿಸಲು ಹಾಕಬೇಕು. ಪೂರ್ತಿ ತೋಳನ್ನು ಹೊಲೆದು ಕತ್ತಿನ ಭಾಗ ಬಂದಾಗ ನಿಲ್ಲಿಸಿ. ಕೊನೆಯಲ್ಲಿ ಮತ್ತೊಮ್ಮೆ ರಿವರ್ಸ್ ಹೊಲಿಗೆಯನ್ನು ಹಾಕಿ.

ಈಗ ಈ ಪೂರ್ತಿ ವಿಧಾನವನ್ನು ಇನ್ನೊಂದು ತೋಳಿಗೂ ಪುನರಾವರ್ತಿಸಿ. ದಾರವನ್ನು ಕತ್ತರಿಸಿ. ನಿಮ್ಮ ಹೊಲಿಗೆ ಹೀಗೆ ಕಾಣಬೇಕು. ಜಿಗ್ ಜಾಗ್ ಹೊಲಿಗೆಯನ್ನು ತೋಳಿನ ತುದಿಯಲ್ಲಿಹೊಲೆದಿರುವ ಬಟ್ಟೆಗೆ ಮುಂದುವರೆಸೋಣ ಇದು ಫ್ರೆಯಿಂಗನ್ನು ತಪ್ಪಿಸುತ್ತದೆ.ತೋಳನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಸೆಲೆಕ್ಟರ್ ಡಯಲನ್ನು C ಮತ್ತು ಹೊಲಿಗೆಯ ಉದ್ದ 1.5 ಗೆ ಇಟ್ಟು ಕತ್ತಿನ ಭಾಗದಿಂದ ಪ್ರಾರಂಭಿಸಿ ತೋಳಿನ ತುದಿಯಿಂದ ಕತ್ತಿನ ಕಡೆಗೆ ಹೊಲೆಯಿರಿ. ಜಿಗ್ ಜಾಗ್ ಮಾಡುವಾಗ ರಿವರ್ಸ್ ಹೊಲಿಗೆಯ ಅಗತ್ಯವಿಲ್ಲಾ. ನೀವು ಇದನ್ನು ಮುಗಿಸಿದ ಮೇಲೆ ಇನ್ನೊಂದು ತೋಳಿಗೂ ಪುನರಾವರ್ತಿಸಿ. ಹೊಲೆಯಲು ತೀಳಿನ ತುದಿಯಿಂದ ಪ್ರಾರಂಭಿಸಿ ಕತ್ತಿನ ವರೆಗೂ ಹೊಲೆಯಿರಿ. ಹೆಚ್ಚಾದ ದಾರವನ್ನು ಕತ್ತರಿಯಿಂದ ಕತ್ತರಿಸಿ. ನಿಮ್ಮ ಹೊಲಿಗೆ ನೋಡಲು ಹೀಗೆ ಕಾಣಬೇಕು.

**ಹಂತ 3 : ನೆಕ್ ಲೈನನ್ನು ಮುಗಿಸುವುದು**

ನೆಕ್ ಲೈನಿಗೆ ಪರಿಪೂರ್ಣವಾದ ನೋಟ ಕೊಡಲು ನಮಗೆ ಬಯಸ್ ಸ್ಟ್ರಿಪಿನ ಅಗತ್ಯವಿರುತ್ತದೆ.ಯೋಚನೆ ಮಾಡಬೇದಿ ನಾವು ನಿಮಗೆ ಈ ಸ್ಟ್ರಿಪ್ ಗಳನ್ನು ಹೇಗೆ ಕತ್ತರಿಸುವುದೆಂದು ಹೇಳಿಕೊಡುತ್ತೇವೆ. ಬಟ್ಟೆಯ ಮಿಕ್ಕಿರುವ ಭಾಗವನ್ನು ತೆಗೆದುಕೊಳ್ಳಿ, ಸ್ಕೇಲನ್ನು ತೆಗೆದುಕೊಂಡು ಡಯಾಗ್ನಲ್ ಗೆರೆಯನ್ನು 45 ಡಿಗ್ರಿಯಲ್ಲಿ ಇಲ್ಲಿ ತೋರಿಸಿರುವಂತೆ ಮಾರ್ಕ್ ಮಾಡಿ. ಮೇಶರಿಂಗ್ ಟೇಪ್ ಸಹಾಯದಿಂದ 1.5 ಇಂಚು ಬೇರೆ ಬೇರೆ ಪಾಯಿಂಟಿನಲ್ಲಿ ಮಾರ್ಕ್ ಮಾಡಿ ನೇರವಾದ ಗೆರೆ ಬರಲು ಹೀಗೆ ಮಾಡಬೇಕು. ನಮಗೆ ಮೂರು ಬಯಾಸ್ ಸ್ಟ್ರಿಪ್ ಬೇಕಾಗಿರುವುದರಿಂದ ಒಂದು ಕತ್ತಿಗೆ ಇನ್ನೆರಡು ತೊಳುಗಳಿಗೆ ಇನ್ನು ಎರಡು ಬಾರಿ ಇದೇ ವಿಧಾನವನ್ನು ಅನುಸರಿಸಿ. ಒಮ್ಮೆ ಎಲ್ಲಾ ಮಾರ್ಕಿಂಗ್ ಗಳು ಮುಗಿದ ಮೇಲೆ ಈ ಸ್ಟ್ರಿಪ್ಗಳನ್ನು ಕತ್ತರಿಯಿಂದ ಕತ್ತರಿಸಿ. ಬಟ್ಟೆಯ ಮೇಲ್ಭಾಗವನ್ನು ನೋಡಿಕೊಂಡು ಕತ್ತರಿಸಿ. ನಮ್ಮ ಬಯಾಸ್ ಸ್ಟ್ರಿಪ್ ಈಗ ತಯಾರಾಗಿದೆ.











ನೆಕ್ ಲೈನನ್ನು ಮುಗಿಸಲು ಸ್ಟ್ರಿಪ್ ಮತ್ತು ಡ್ರೆಸ್ಸನ್ನು ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ.ಸರಿಯಾದ ಕಡೆಯನ್ನು ತಪ್ಪಾದ ಕಡೆ ಭುಜದ ಜಾಯಿಂಟಿನ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು. ಸ್ಟಿಚ್ ಸೆಲೆಕ್ಟರ್ ಡಯಲನ್ನು **A** ಮತ್ತು ಹೊಲಿಗೆಯ ಉದ್ದ 2.5 ಗೆ ಇಟ್ಟು ಕತ್ತಿನ ಪೂರ್ತಿ ಕೊನೆಯವರೆಗೂ ಹೊಲೆಯಬೇಕು. ಪ್ರಾರಂಭದ ಭಾಗ ಬಂದಾಗ ಮಷೀನನ್ನು ನಿಲ್ಲಿಸಿ. ಬಟ್ಟೆಯನ್ನು ತೆಗೆದು ಸ್ಟ್ರಿಪ್ ಸೈಡನ್ನು ಭುಜದ ಜಾಯಿಂಟಿಗೆ ಅಲೈನ್ ಮಾಡಿ ಮತ್ತು ಜಾಯಿಂಟನ್ನು ಹೊಲಿಗೆಯಿಂದ ಭದ್ರಗೊಳಿಸಿ. ಕತ್ತರಿಯಿಂದ ಹೆಚ್ಚಾದ ಸ್ಟ್ರಿಪನ್ನು ಕತ್ತರಿಸಿ. ಈಗ ಮುಂಚೆ ಬಿಟ್ಟಿರುವ ಗ್ಯಾಪನ್ನು ಹೊಲೆಯಿರಿ, ಇದು ಬಯಾಸ್ ಸ್ಟ್ರಿಪನ್ನು ಪೂರ್ತಿ ನೆಕ್ ಲೈನಿಗೆ ಹೊಂದಿಕೊಂಡಿರಬೇಕು.

ಮುಂದಿನ ಹಂತದ ಕಡೆ ಗಮನವಹಿಸಿ. ಬಯಾಸ್ ಸ್ಟ್ರಿಪನ್ನು ಕಾಲು ಇಂಚು ಬಲಭಾಗದ ಕಡೆ ಮಡಚಿ ಮತ್ತೆ ಅದನ್ನು ಸೀಮ್ ಅಲೋಯನ್ಸ್ ಮೇಲೆ ಮಡಚಿ. ಮಡಕೆಯನ್ನು ಕೊನೆಹೊಲಿಗೆಯೊಂದಿಗೆ ಬಟ್ಟೆಯ ಬಲಭಾಗದಿಂದ ಭದ್ರಗೊಳಿಸಿ.ಅಚ್ಚುಕಟ್ಟಾದ ಫಿನಿಷ್ ಗಾಗಿ ಹೆಚ್ಚಾದ ದಾರವಿದ್ದರೆ ಕತ್ತರಿಸಿ.










**ಹಂತ 4 : ಸೈಡ್ ಸೀಮ್ ಅನ್ನು ಮುಗಿಸುವುದು**

ಸೈಡ್ ಸೀಮನ್ನು ಮುಗಿಸಲು ನಾವು ತೋಳಿನ ಹೆಮ್ಮಿಂಗಿನಿಂದ ಹೊಲೆಯಲು ಪ್ರಾರಂಭಿಸೋಣ. ಡ್ರೆಸ್ಸಿನ ತುದಿಯವರೆಗೂ ಹೊಲೆಯಬೇಕು. ಪ್ರೆಸ್ಸರ್ ಫುಟಿನ ಕೆಳಗೆ ತೋಳಿನ ಕೆಳಭಾಗವನ್ನು ಇಟ್ಟು ನೇರ ಹೊಲಿಗೆಯನ್ನು ಹಾಕಲು ಪ್ರಾರಂಭಿಸಿ. ಆರ್ಮ್ ಹೋಲಿನ  ಹತ್ತಿರ ಬಂದಾಗ ಹುಷಾರಾಗಿ ಹೊಲೆಯಿರಿ ಇದು ನಿಮಗೆ ಪರಿಪೂರ್ಣವಾದ ಹೊಲಿಗೆಯನ್ನು ಕೊಡುತ್ತದೆ. ಫಿನಿಷಿಂಗ್ ಟಚ್ ಕೊಡಲು ಕೊನೆಯಲ್ಲಿ ಜಿಗ್ ಜಾಗ್ ಹೊಲಿಗೆಯನ್ನು ಹಾಕುವ ಸಮಯ. ಸೋಳನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಸ್ಟಿಚ್ ಸೆಲೆಕ್ಟರನ್ನು C ಮತ್ತು ಹೊಲಿಗೆಯ ಉದ್ದ 1.5 ಗೆ ಇಟ್ಟು ಜಿಗ್ ಜಾಗ್ ಹೊಲಿಗೆಯನ್ನು ತೋಳಿನಿಂದ ಡ್ರೆಸ್ಸಿನ ಬಾಟಮ್ ವರೆಗೂ ಹೊಲೆಯಿರಿ. ಇದಾದ ಮೇಲೆ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು. ನಾವು ಅರ್ಮಿನ ಕೆಳಗೆ ಸ್ಲಾಷಸನ್ನು ಮಾಡಬೇಕು. ಸೀಮ್ ಪ್ಯುಕೆರಿಂಗನ್ನು ತಡೆಯಲು ಸ್ಲಾಷಿಂಗ್ ಮಾಡಬೇಕು.

ನಾವು ಡ್ರೆಸ್ಸಿನ ಇನ್ನೊಂದು ಕಡೆಗೆ ಪೂರ್ತಿ ಹೊಲೆಯುವ ವಿಧಾನವನ್ನು ಪುನರಾವರ್ತಿಸಿ ಜಿಗ್ ಜಾಗ್ ಇಂದ ಮುಂದುವರಿಸಿ ಆರ್ಮ್ ಹೋಲಿನ ಕೆಳಗೆ ಸ್ಲಾಷ್ ಮಾಡಬೇಕು.

**ಹಂತ 5 : ತೋಳಿನ ಹೆಮ್ಮನ್ನು ಮುಗಿಸುವುದು**

ಬಯಾಸ್‌ಸ್ಟ್ರಿಪಿನ ಎರಡು ಹೆಚ್ಚಾದ ಪೀಸ್ ಗಳನ್ನು ಮೊದಲೇ ಹೇಳಿದಂತೆ ತೆಗೆದುಕೊಳ್ಳಿ ಒಂದು ಪೀಸ್ ಬಯಾಸ್‌ಸ್ಟ್ರಿಪನ್ನು ತೆಗೆದುಕೊಂಡು ಡ್ರೆಸ್ಸಿನ ಸ್ಲೀವ್ ಎಡ್ಜಿನಲ್ಲಿ ಇಡಬೇಕು. ಬಯಾಸ್‌ಸ್ಟ್ರಿಪಿನ ಸರಿಯಾದ ಭಾಗ ಬಟ್ಟೆಯ ಹಿಂಭಾಗವನ್ನು ನೋಡುವಂತಿರಬೇಕು. ಸರ್ಕ್ಯುಲರ್ ಸೀಮ್ ಹೊಲೆಯಲು ಮಷೀನಿನ ಅಸ್ಸೆಸರಿ ಬಾಕ್ಸನ್ನು ತೆಗೆಯಿರಿ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಹೊಂದಿಸಿ. ಸ್ಟಿಚ್ ಸೆಲೆಕ್ಟರ್ ಡಯಲನ್ನು ನೇರ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದವನ್ನು 2.5 ಸ್ಟಾರ್ ಹೊಲಿಗೆಗೆ ಇಡಬೇಕು. ತೋಳಿನ ಸುತ್ತಲೂ ತುದಿಯನ್ನು ತಲಪುವವರೆಗೂ ಹೊಲೆಯುತ್ತಾ ಹೋಗಿ. ನೆಕ್ಕನ್ನು ಹೊಲೆದಂತೆಯೇ ಹೆಚ್ಚಾದ ಬಯಾಸ್‌ಸ್ಟ್ರಿಪ್ಪನ್ನು ಒಂದು ಇಂಚು ತೆಗೆದುಕೊಂಡು ವೀಡಿಯೋದಲ್ಲಿ ತೋರಿಸಿರುವಂತೆ ಇದಕ್ಕೆ ಅಡ್ಡಲಾಗಿ ಹೊಲಿಗೆಯನ್ನು ಹಾಕಿ. ಕತ್ತರಿಯ ಸಹಾಯದಿಂದ ಹೆಚ್ಚಾದ ದಾರವನ್ನು ಕತ್ತರಿಸಿ. ಈಗ ತೋಳನ್ನು ಬಲಭಾಗಕ್ಕೆ ತಿರುಗಿಸಿ. ಬಯಾಸ್‌ಸ್ಟ್ರಿಪ್ಪನ್ನು ಕಾಲು ಇಂಚು ಮಡಚಿ ಮತ್ತೆ ಅದನ್ನು ಸೀಮ್ ಲೈನಿನ ಮೇಲೆ ಮಡಚಬೇಕು. ತೋಳನ್ನು ಮಷೀನಿನಲ್ಲಿ ಇಟ್ಟು ನೇರ ಹೊಲಿಗೆಯನ್ನು ಕೊನೆಯಲ್ಲಿ ತೋಳಿಗೆ ಅಡ್ಡಲಾಗಿ ಹೊಲೆಯಿರಿ. ಹೆಚ್ಚಾದ ದಾರವನ್ನು ಕತ್ತರಿಸಿ. ಈಗ ನಿಮ್ಮ ತೋಳುಗಳು ಮುಗಿದಿವೆ. ಮುಗಿದಿರುವ ತೋಳು ನೋಡಲು ಹೀಗೆ ಕಾಣಬೇಕು.ಇದೇ ವಿಧಾನವನ್ನು ಇನ್ನೊಂದು ತೋಳಿಗೂ ಪುನರಾವರ್ತಿಸಿ.










**ಹಂತ 6 : ಬಾಟಮ್ ಹೆಮ್ಮನ್ನು ಮುಗಿಸುವುದು**

ಇದು ತುಂಬಾ ಸುಲಭ ಡ್ರೆಸ್ಸಿನ ಬಾಟಮನ್ನು ಅರ್ಧ ಇಂಚು ಎರಡು ಬಾರಿ ಇಲ್ಲಿ ತೋರಿಸಿರುವಂತೆ ಮಡಚಬೇಕು. ಈಗ ಡ್ರೆಸ್ಸಿನ ಬಾಟಮಿಗೆ ಅಡ್ಡಲಾಗಿ ನೇರ ಹೊಲಿಗೆಯನ್ನು ಹಾಕಬೇಕು. ಈಗ ಬಾಟಮ್ ಹೆಮ್ಮ್ ಲೈನ್ ಮುಗಿದಿದೆ. ನೀವು ಯಶಸ್ವಿಯಾಗಿ ಟೆಂಟ್ ಡ್ರೆಸ್ ಮಾಡುವ ಎಲ್ಲಾ ಹಂತಗಳನ್ನು ದಾಟಿದ್ದೀರಿ. ನಿಮ್ಮ ಬೆನ್ನನು ನೀವು ತಟ್ಟಿಕೊಳ್ಳಿ

ಈ ಡ್ರೆಸ್ಸನ್ನು ಚಮತ್ಕಾರಿ ಮತ್ತು ಆಕರ್ಷನೀಯ ಮಾಡುವುದು ಒಂದು ಉತ್ತಮ ಅವಕಾಶ. ಮಾರ್ಕೆಟಿನಲ್ಲಿ ಸಿಗುವ ವಿಧವಿಧವಾದ ರಿಬ್ಬನ್ ಮತ್ತು ಸೀಕ್ವಿನ್ಸಗಳನ್ನು ಬಲಾಸಿ ನೀವು ಸೃಜನಶೀಲರಾಗಬಹುದು. ಊಷಾ ಜನೋಮ್ ರಿಬ್ಬನ್ ಸೀಕ್ವಿನ್ ಫುಟನ್ನು ಬಳಸಿ ಈಗ ಹೊಲೆದ ಟೆಂಟ್ ಡ್ರೆಸ್ಸಿನ ಅಂದವನ್ನು ಹೆಚ್ಚಿಸಿ. ಈ ಫುಟನ್ನು ಹೇಗೆ ಉಪಯೋಗಿಸುವುದು ಎಂದು ನೀವು ತಿಳಿಯಬೇಕಾದರೆ ನಮ್ಮ ವೆಬ್ ಸೈಟ್ www.ushasew.com ಗೆ ಹೋಗಿ ಇದಕ್ಕೆ ಟುಟೋರಿಯಲ್ಲನ್ನು ನೋಡಿ.

ನೀವು ಹೊಲೆದಿರುವುದು ನಿಮಗೆ ಹೆಮ್ಮೆ ಅನಿಸುತ್ತಿಲ್ಲವೇ? ಒಂದು ಪಿಕ್ಚರ್ ತೆಗೆದು ನಿಮ್ಮ ಸ್ನೇಹಿತರೊಂದಿಗೆ ಮತ್ತು ಸೋಶಿಯಲ್ ಮೀಡಿಯಾ ಹ್ಯಾಂಡಲ್ ಗಳಲ್ಲಿ ಹಂಚಿಕೊಳ್ಳಿ ನೀವು ಟೆಂಟ್ ಡ್ರೆಸ್ಸನ್ನು ನಿಮಗಿಷ್ಟ ಬಂದಂತೆ ಬೇರೆ ಬೇರೆ ರೀತಿಯಲ್ಲಿ ಅಭಿವೃದ್ದಿ ಗೊಳಿಸಬಹುದು ಮತ್ತು ಅಲಂಕರಿಸಬಹುದು









